ದಿನಾಂಕ 07-08-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**ಮುಂದುವರಿದ ಮುಖ್ಯ ವಿಚಾರಣೆ : ಶ್ರೀ ವಿ.ಕೆ. ವಕೀಲರಿಂದಃ**

ನಾನು ನನ್ನ ಆಧಾರ್ ಕಾರ್ಡ್ ನ ನೋಟರೀಕೃತ ದಾಖಲೆಯನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ.11 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರಃ ಶ್ರೀ. ಬಿ.ಸಿ. ವಕೀಲರಿಂದಃ**

2. ವಾದಿ ನನ್ನ ಅಜ್ಜನ ಅಕ್ಕನ ಮಗಳು. ನನ್ನನ್ನು ಈ ದಿನ ವಾದಿ ಕೃಷ್ಣಪ್ಪ ರವರು ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿದ್ದಾರೆ. ನಾನು ಸಲ್ಲಿಸಿರುವ ವಾಕ್ಯ ಪ್ರಮಾಣಪತ್ರವನ್ನು ತಯಾರಿಸಲು ವಾದಿ ಕೃಷ್ಣಪ್ಪ ಮಾಹಿತಿ ಕೊಟ್ಟಿದ್ದಾರೆ , ನಾನು ಅಲ್ಲ. ಪ್ರತಿವಾದಿಯವರು ನಿಮಗೆ ಗೊತ್ತಾ ಎಂದರೆ ಸಾಕ್ಷಿಯು 6ನೇ ಪ್ರತಿವಾದಿ ಬಾಬು ಗೊತ್ತು ಎಂದು ನುಡಿಯುತ್ತಾರೆ. ಪ್ರತಿವಾದಿಗಳು ನನ್ನ ಸಂಬಂಧಿಕರು.

3. ನನ್ನ ವಾಕ್ಯ ಪ್ರಮಾಣಪತ್ರದಲ್ಲಿ ನಮೂದಿರುವ ಸರ್ವೆ ನಂಬರ್ 115/2D ರ ಜಾಗ ಅಂಗಾರ ಅಲಿಯಾಸ್ ಕರಿಯ ಎಂಬುವವರಿಗೆ ದೆಯ್ಯು ಎಂಬುವವರಿಂದ ಬಂದಿರುತ್ತದೆ. ನಾನು ಹೇಳುವ ಸರ್ವೆ ನಂಬರ್ 115/2D ಜಾಗ ಐತ ಎನ್ನುವವರಿಗೆ ಬಂದಿದೆ ಎಂದರೆ ಸರಿ. ಐತ ಎನ್ನುವವರಿಗೆ ಒಬ್ಬಳೇ ಮಗಳು ಎಂದರೆ ಸರಿಯಲ್ಲ. ಅವರಿಗೆ ಇಬ್ಬರು ಮಕ್ಕಳು , ಅಂಗಾರ ಮತ್ತು ಕರ್ತ ಎನ್ನುವವರು ಅವರ ಮಕ್ಕಳು. ತನಿಯಾ ಎನ್ನುವವರು ಐತ ಎನ್ನುವವರ ಕುಟುಂಬ ವರ್ಗದಲ್ಲಿ ಇಲ್ಲ. ವಾದಿಯವರ ಮನೆಗೆ ನಾನು ಹಾಗೂ ವಾದಿಗಳು ನಮ್ಮ ಮನೆಗೆ ಹೋಗಿ ಬರುವುದು ಇರುತ್ತದೆ. ಆ ದಾಕ್ಷಿಣ್ಯದಲ್ಲಿ ವಾದಿಯವರ ಕೋರಿಕೆ ಮೇರೆಗೆ ನಾನು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

4. ನಾನು ಹೇಳುವಂತೆ ಅಂಗಾರ ಮತ್ತು ಕರ್ತ ಎನ್ನುವವರು ಸಂಬಂಧಿಕರು ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದೆರ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

ನನ್ನ ಉಕ್ತಲೇಖನ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ, ಹೇ, ಕೇ, ಸರಿ ಇದೆ.

1ನೇ ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು

O.S. No.36/2021, PW: 2

ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ, ಪುತ್ತೂರು ದ.ಕ.